## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 231/**22** |

| | | |
|---|---|---|
| ಸಾಕ್ಷಿದಾರರ ಹೆಸರು | **ನೇತ್ರಾವತಿ** | |
| ಗಂಡನ ಹೆಸರು | **ದೀಪು** | ಸಾಕ್ಷಿಗೆ ದಿಃ **09.01.2023** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 30 **ವರ್ಷ** | |
| ಉದ್ಯೋಗ | **ಗೃಹಿಣಿ** | ಪಿ.ಡಬ್ಲ್ಯೂ **-07** |
| ವಾಸ ಸ್ಥಳ | **ನಿವೇದಿತಾನಗರ, ಮೈಸೂರು** | ಸಿ.ಡಬ್ಲ್ಯೂ **-19** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನಾನು ಆರೋಪಿತರನ್ನು ಗುರುತಿಸುತ್ತೇನೆ. ಆರೋಪಿತರು ವಾಸವಾಗಿದ್ದ ಪಕ್ಕದ ಮನೆಯಲ್ಲಿ ನಾನು 7 ವರ್ಷದಿಂದ ವಾಸವಾಗಿದೆನು, ಈಗ ಕಳೆದ 6 ತಿಂಗಳಿಂದ ನಿವೇದಿತಾನಗರದಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯ ಹಿಂಭಾಗದಲ್ಲಿ ಆರೋಪಿತರ ಮನೆ ಇರುತ್ತದೆ. ಮೃತ ನಂಜಮ್ಮ ಇವರು ಆರೋಪಿ ನಾಗಮ್ಮ ಇವರಿಗೆ ಅತ್ತೆ ಆಗಬೇಕು, ಉಳಿದ ಆರೋಪಿತರಿಗೆ ಅಜ್ಜಿಯಾಗಬೇಕು. ಆರೋಪಿತರು ವಾಸವಾಗಿರುವ ಮನೆ 2 ಅಂತಸ್ತಿನ ಮನೆ ಇರುತ್ತದೆ. ಆರೋಪಿತರು ಮೊದಲನೇ ಅಂತಸ್ತಿನಲ್ಲಿ ವಾಸವಾಗಿದ್ದರು. 2 ನೇ ಅಂತಸ್ತಿನಲ್ಲಿರುವ ಕೋಣೆಯಲ್ಲಿ ಮೃತ ನಂಜಮ್ಮ ವಾಸವಾಗಿದ್ದರು. ನೆಲಮಹಡಿ ಮನೆಯನ್ನು ಪಂಕಜ ಎನ್ನುವವರಿಗೆ ಬಾಡಿಗೆ ಕೊಟ್ಟಿದ್ದರು. ನಂಜಮ್ಮ ಇವರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು, ನಮ್ಮ ಅತ್ತೆ ಅನುಸುಯಮ್ಮ ಅವರು ಜೊತೆ ಸ್ನೇಹದಿಂದ ಇದ್ದರು. ನಂಜಮ್ಮ ಇವರು ಜೀವಂತ ಇದ್ದಾಗ ಅವರ ಪಾಡಿಗೆ ಅವರು ಇದ್ದರು, ಆರೋಪಿತರು ಅವರ ಪಾಡಿಗೆ ಅವರು ಇದ್ದರು. ಆರೋಪಿತರು ಮತ್ತು ಮೃತ ನಂಜಮ್ಮ ಮಧ್ಯೆ ಯಾವ ರೀತಿ ಭಾದವ್ಯ ಇತ್ತು ಎಂದು ನನಗೆ ಗೊತ್ತಿಲ್ಲ, ನಂಜಮ್ಮ ಕಳೆದ ವರ್ಷ ಅಕ್ಟೋಬರ್ ನಲ್ಲಿ ಮೃತಪಟ್ಟಿರುತ್ತಾರೆ. ನಂಜಮ್ಮ ಇವರು ಸಾಯುವಕ್ಕಿಂತ ಹಿಂದಿನ ದಿನ ನಮ್ಮ ಮನೆಗೆ ಬಂದಿದ್ದರು. ನಂಜಮ್ಮ ಸಂಜೆ 6.15 ಗಂಟೆಯವರೆಗೆ ನಮ್ಮ ಮನೆಯಿಂದ ಅವರ ಮನೆಗೆ

ಹೋದರು. ಮರುದಿವಸ ನಾನು ನಮ್ಮ ಮನೆಯ ಮೇಲ್ಛಾವಣಿ ಮೇಲೆ ತೋಳಿದ ಬಟ್ಟೆಗಳನ್ನು ಬೀಸಲಿಗೆ ಹಾಕಲು ಹೋದಾಗ ಆರೋಪಿತರು ನಂಜಮ್ಮನ ಕೋಣೆಯ ಹತ್ತಿರ ಇದ್ದರು, ನಾನು ಅವರನ್ನು ಕೇಳಿದಾಗ ಅಜ್ಜಿ ನಂಜಮ್ಮ ಕೆಳಗಡೆ ಬಂದಿಲ್ಲ ಎಂದು ಹೇಳಿದರು, ನಾನು ಕೂಡಾ ಅವರ ಮನೆಗೆ ಹೋಗಿ ನೋಡಿದೆನು, ನಂಜಮ್ಮ ಹಾಸಿಗೆ ಮೇಲೆ ಮಲಗಿದರು ಕೂಗಿದರೆ ಉತ್ತರ ಕೊಡಲಿಲ್ಲ. ನಾನು ಕಿಟಕಿಯಿಂದ ನಂಜಮ್ಮನನ್ನು ನೋಡಿರುತ್ತೇನೆ, ಬಾಗಿಲು ಮುಚ್ಚಿತ್ತು. ಕಿಟಕಿ ಗ್ಲಾಸ್‌ಗಳು ಒಡೆದು ಹೋಗಿದ್ದವು. ನಂತರ ಪೊಲೀಸರು ಬಂದರು, ನಾನು ಮನೆಗೆ ಹೋಗಿರುತ್ತೇನೆ. ಪೊಲೀಸರು ನನಗೆ ವಿಚಾರಣೆ ಮಾಡಿರುತ್ತಾರೆ. ನಂಜಮ್ಮ ಆರೋಪಿತರ ಬಗ್ಗೆ ನನ್ನ ಹತ್ತಿರ ಏನು ಹೇಳಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನಂಜಮ್ಮ ಇವರು ತಮ್ಮ ಅಡಿಗೆಯನ್ನು ತಾವೇ ಮಾಡಿಕೊಳ್ಳುತ್ತಿದ್ದರು, ಆರೋಪಿತರು ನಂಜಮ್ಮನ ಯೋಗ ಕ್ಷೇಮ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮ ಮತ್ತು ಆರೋಪಿತರ ಮಧ್ಯೆ ಗಲಾಟೆಗಳು ನಡೆಯುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಜೊತೆ ಗಲಾಟೆ ಮಾಡುತ್ತಾರೆ ಎಂದು ನನ್ನ ಹತ್ತಿರ ಹೇಳಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ 2 ಬಾಣಂತನಕ್ಕೆ ಬಂದಿದ್ದರು ಎಂದರೆ ಸರಿ ಇದೆ. ಕೆಲವೊಂದು ಸಲಾ ನಂಜಮ್ಮಳ ಮೇಲೆ ಹಲ್ಲೆ ಮಾಡಿದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿಃ 02.10.2021 ರಂದು ನಂಜಮ್ಮ ಮನೆಗೆ ಟಿ.ವಿ ನೋಡಲು ಬಂದಿದ್ದರು ಎಂದರೆ ಸರಿ ಇದೆ. ದಿಃ 2.10.2021 ರಂದು ಬೆಳಿಗ್ಗೆ 9.00 ರಿಂದ 10.00 ಗಂಟೆಯ ಸಮಯದಲ್ಲಿ ಆರೋಪಿತರು ನಂಜಮ್ಮಳ ಜೊತೆ ಗಲಾಟೆ ಮಾಡಿಕೊಂಡು ನಂತರ ಸುಮ್ಮನಾದರು ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು :- ಆರೋಪಿತರ ಪರ ವಕೀಲರಿಂದಃ-**

ಆರೋಪಿ ಸಿದ್ದರಾಜು ಈತನು ನಂಜಮ್ಮಳ ಔಷೋಧಪಚಾರ ನೋಡಿಕೊಳ್ಳುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸಿದ್ದರಾಜು ಈತನು ನಂಜಮ್ಮಳ ಜೊತೆ ಚೆನ್ನಾಗಿ ಇದ್ದನು ಎಂದರೆ ಸರಿ ಇದೆ. ಉಳಿದ ಆರೋಪಿತರು ಕೂಡಾ ನಂಜಮ್ಮನ ಜೊತೆ ಚೆನ್ನಾಗಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮ ಇವರು ತಮ್ಮ ವೈಯಕ್ತಿಕ ವಿಷಯ ನಮಗೆ ಹೇಳುತ್ತಿರಲಿಲ್ಲ. ನಂಜಮ್ಮ ಇವರ ವಯಸ್ಸು ಅಂದಾಜು 75 ರಿಂದ 80 ವರ್ಷ ಆಗಿತ್ತು ಎಂದರೆ ಸರಿ ಇದೆ. ನಂಜಮ್ಮ ಇವರ ಹೆಣ್ಣು ಮಕ್ಕಳು ಅವರ ಮನೆಗೆ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ, ಆದರೆ ನಂಜಮ್ಮ ಅವರ ಹೆಣ್ಣು ಮಕ್ಕಳ ಮನೆಗೆ ಹೋಗುತ್ತಿದ್ದರು. ನಂಜಮ್ಮ ಇವರು ಅವರ ಹೆಣ್ಣು ಮಕ್ಕಳ ಮನೆಗೆ ಹೋಗುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮಗೆ ಯಾವಾಗ ಹೇಳಿದರು ಎಂದು ಕೇಳಿದಾಗ, ನಮ್ಮ ಮನೆಗೆ ಬಂದಾಗ ಹೇಳಿದರು ಎಂದು ಹೇಳುತ್ತಾರೆ. ನಾನು ನಂಜಮ್ಮ ಇವರು ಅವರ ಮಕ್ಕಳ ಮನೆಗೆ ಹೋಗಿದ್ದನ್ನು ನಾನು ಪ್ರತ್ಯೆಕ್ಷವಾಗಿ ನೋಡಿರುವುದಿಲ್ಲ. ನಾನು ನನ್ನ ಮನೆಯ ಮೇಲ್ಚಾವಣಿಯ ಮೇಲೆ ತೊಳೆದ ಬಟ್ಟೆಯನ್ನು ಬೀಸಲಿಗೆ ಹಾಕಲು ಹೋದಾಗ, ನಂಜಮ್ಮನ ಕೋಣೆಯ ಹತ್ತಿರ ಬಾಡಿಗೆದಾರರು ಮತ್ತು ಆರೋಪಿತರು ಇದ್ದರು. ನಾನು ಆರೋಪಿ ನಾಗಮ್ಮ ಇವರಿಗೆ ಏನಾಗಿದೆ ಎಂದು ಕೇಳಿದೆನು. ನಂತರ ನಾನು ಅವರ ಮನೆಗೆ ಹೋಗಿ ನೋಡಿದೆನು.

ಆರೋಪಿತರ ಮನೆಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಕಿಟಕಿ ಗ್ಲಾಸ್ ಗಳು ಯಾರು ಒಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಆದರೆ ದಿನಾಂಕ ನನಗೆ ಗೊತ್ತಿಲ್ಲ. ನಂಜಮ್ಮ ಇವರಿಗೆ ಹೃದಯಕ್ಕೆ ಸಂಬಂಧಪಟ್ಟಂತೆ ಸುಮಾರು ಕಾಯಿಲೆಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮ ಇವರು ವಾಸಮಾಡುವ ಕೋಣೆಗೆ ಒಂದೇ ಬಾಗಿಲು ಇತ್ತು ಎಂದರೆ ನನಗೆ ನೆನಪಿಲ್ಲ. ರೂಮಿನ ಹೊರಗಡೆ ಶೌಚಾಲಯದ ಕೋಣೆ ಇತ್ತು ಎಂದರೆ ಸರಿ ಇದೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು